# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 13/2025

ದಿನಾಂಕ - 18.12.2025

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ರವಿ | ಪ್ರಾ.ಸಾ. | – | 01 |
| ತಂದೆಯ ಹೆಸರು | – | ವೀರಣ್ಣ | ಚಾ.ಸಾ. | – | 01 |
| ವಯಸ್ಸು | – | 42 ವರ್ಷ | | | |
| ಉದ್ಯೋಗ | – | ಚಾಲಕ | | | |
| ವಾಸ ಸ್ಥಳ | – | ಚಳ್ಳಕೆರೆ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ನನಗೆ ಈ ಕೇಸಿನ ಚಾಸಾ–2 ರಿಂದ 6 ಇವರು ಗೊತ್ತಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನಾನು ನೋಡಿದ್ದು, ಆತನು ನನಗೆ ಗೊತ್ತಿರುತ್ತಾನೆ. ಈಗ್ಗೆ ಅಂದಾಜು ಒಂದು ವರ್ಷದ ಹಿಂದೆ ಒಂದು ದಿನ ಸಂಜೆ 7.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ–2 ರಿಂದ 4 ಇವರು ಕೂಡಿಕೊಂಡು ಚಳ್ಳಕೆರೆ ಪಟ್ಟಣದ ಬಳ್ಳಾರಿ ರಸ್ತೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜಿನ ಬಳಿ ಇರುವ ಒಂದು ಕಟ್ಟೆಯ ಮೇಲೆ ಮಾತನಾಡುತ್ತಾ ಕುಳಿತಿದ್ದೆವು. ಆ ವೇಳೆಗೆ ಅಲ್ಲಿಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ಬಂದು ತನಗೆ ಕುಡಿಯಲು ದುಡ್ಡು ಕೊಡಿ ಎಂದು ನಮ್ಮನ್ನು ಕೇಳಿದನು. ಅದಕ್ಕೆ ನಾವು ನಮ್ಮ ಬಳಿ ದುಡ್ಡು ಇರುವುದಿಲ್ಲವೆಂದು ಆರೋಪಿತನಿಗೆ ಹೇಳಿರುತ್ತೇವೆ. ಆಗ ಆರೋಪಿಯು ನಮ್ಮನ್ನು ಕುರಿತು ಸೂಳೇಮಕ್ಕಳಾ, ಬೋಳಿಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆಗ ಚಾಸಾ–2 ಇವನು ಎದ್ದು ನಮ್ಮ ಬಳಿ ಹಣವಿಲ್ಲವೆಂದು ಹೇಳಿ ಆರೋಪಿಯನ್ನು ತಳ್ಳಿಕೊಂಡು ಹೋಗಿದ್ದು, ಆಗ ಆರೋಪಿಯು ಒಮ್ಮೆಗೆ ತನ್ನ ಬಳಿ ಇದ್ದ ಚಾಕುವಿನಿಂದ ಶ್ರೀನಿವಾಸನ ಕುತ್ತಿಗೆಯ ಎರಡೂ ಭಾಗಕ್ಕೆ ಹೊಡೆದು ರಕ್ತಗಾಯಗೊಳಿಸಿರುತ್ತಾನೆ. ಆಗ ಗಲಾಟೆ ಬಿಡಿಸಲು ಚಾಸಾ–3 ಹೋಗಿದ್ದು, ಆ ವೇಳೆಗೆ ಆತನಿಗೂ ಕೂಡ ಆರೋಪಿಯು ಚಾಕುವಿನಿಂದ ಕುತ್ತಿಗೆಗೆ ಹಾಕಿರುತ್ತಾನೆ. ಆಗ ನಾನು ಮತ್ತು ಚಾಸಾ–4 ಕೂಡಿ ಜಗಳ ಬಿಡಿಸಲು ಹೋಗಿದ್ದು, ಆಗ ಆರೋಪಿಯು ಚಾಸಾ–4 ಇವರನ್ನು ನೂಕಿದ್ದು, ಅದರಿಂದ ಚಾಸಾ–4 ಕೆಳಗೆ ಬಿದ್ದಿದ್ದು, ಅದರಿಂದ ಆತನ ಬಲಮೊಣಕಾಲಿನ

ಬಳಿ ಗಾಯವಾಗಿರುತ್ತದೆ. ಆ ವೇಳೆಗೆ ಆರೋಪಿಯು ನನ್ನನ್ನು ಕೂಡ ನೂಕಿದ್ದು, ಆಗ ನಾನು ಕೆಳಗೆ ಬಿದ್ದಿರುತ್ತೇನೆ.

ನಂತರ ಗಾಯಗೊಂಡ ಚಾಸಾ–2 ಇವರನ್ನು ನಾವು ಚಿಕಿತ್ಸೆ ಕುರಿತು ಬೈಕಿನಲ್ಲಿ ಚಳ್ಳಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅದಾದ ನಂತರ ಗಾಯಗೊಂಡ ಚಾಸಾ–3 ಇವರನ್ನು ಕೂಡ ಆಸ್ಪತ್ರೆಗೆ ಚಿಕಿತ್ಸೆ ಕುರಿತು ಕರೆದುಕೊಂಡು ಬಂದಿರುತ್ತಾರೆ. ಅದಾದ ನಂತರ ನಾನು ಅದೇ ದಿನ ರಾತ್ರಿ ಅಂದಾಜು 9.00 ಗಂಟೆಗೆ ಚಳ್ಳಕೆರೆ ಪೋಲೀಸ್ ಠಾಣೆಗೆ ಹೋಗಿ ಘಟನೆಯ ಬಗ್ಗೆ ಪೋಲೀಸರ ಮುಂದೆ ಪಿರ್ಯಾದಿ ನೀಡಿರುತ್ತೇನೆ. ಈಗ ನೋಡುತ್ತಿರುವ ಪಿರ್ಯಾದಿ ಅದುವೇ ಇರುತ್ತದೆ. ಪಿರ್ಯಾದನ್ನು ನಿಪಿ–1 ಎಂದು, ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಅದಾದ ನಂತರ ಮಾರನೇ ದಿನ ಪೋಲೀಸರು ಮಧ್ಯಾಹ್ನ ಅಂದಾಜು 2.30 ಗಂಟೆಗೆ ಸ್ಥಳಕ್ಕೆ ನನ್ನನ್ನು ಕರೆಸಿದ್ದು, ಆ ನಂತರ ಅಲ್ಲಿಗೆ ಇಬ್ಬರು ವ್ಯಕ್ತಿಗಳನ್ನು ಕರೆಸಿದ್ದು, ಆಗ ನಾನು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿದ್ದು, ಆಗ ಪೋಲೀಸರು ಆ ಘಟನಾ ಸ್ಥಳದ ಸ್ಥಿತಿಗತಿಯ ಬಗ್ಗೆ ಪಂಚನಾಮೆ ಮಾಡಿಕೊಂಡು, ಅದನ್ನು ಬರೆದುಕೊಂಡು ಆ ವೇಳೆಗೆ ಘಟನಾ ಸ್ಥಳದಲ್ಲಿ ಅಲ್ಲಲ್ಲಿ ರಕ್ತ ಬಿದ್ದಿದ್ದನ್ನು ನೋಡಿ ಅದನ್ನು ಮುಂದಿನ ಕ್ರಮಕ್ಕೆಂದು ಸ್ವಲ್ಪ ಮಣ್ಣು ಸಮೇತ ತೆಗೆದುಕೊಂಡು ಅದನ್ನು ಬಟ್ಟೆ ಚೀಲದಲ್ಲಿ ಹಾಕಿ ಸೀಲ್ ಮಾಡಿಕೊಂಡಿರುತ್ತಾರೆ. ಅದೇ ಸ್ಥಳದಲ್ಲಿ ಆರೋಪಿಯು ಘಟನೆ ಸಮಯದಲ್ಲಿ ಚಾಸಾ–2 ಮತ್ತು 3 ಇವರಿಗೆ ಹೊಡೆಯಲು ಉಪಯೋಗಿಸಿದ ಚಾಕು ಬಿದ್ದಿದ್ದು, ಅದನ್ನು ಕೂಡ ಪೋಲೀಸರು ಮುಂದಿನ ಕ್ರಮಕ್ಕೆಂದು ತೆಗೆದುಕೊಂಡು, ಆ ಪಂಚನಾಮೆಗೆ ನನ್ನ ಮತ್ತು ಅಲ್ಲಿ ಹಾಜರಿದ್ದ ಇಬ್ಬರು ವ್ಯಕ್ತಿಗಳ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಈಗ ನೋಡುತ್ತಿರುವ ಪಂಚನಾಮೆಯಲ್ಲಿಯ ಸಹಿ ನನ್ನದೇ ಇರುತ್ತದೆ. ಪಂಚನಾಮೆಯನ್ನು ನಿಪಿ–2 ಎಂದು, ಅದರಲ್ಲಿಯ ಸಾಕ್ಷಿ ಗುರುತಿಸಿದ ಅವರ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನಿಪಿ–2 ಎಂದು ಗುರುತಿಸಿದ ಪಂಚನಾಮೆಯನ್ನು ಬರೆದುಕೊಂಡಾಗ ಆ ಸ್ಥಳದ ಸ್ಥಿತಿಗತಿಯ ಬಗ್ಗೆ ಪೋಲೀಸರು ಕಚ್ಚಾ ನಕಾಶೆಯನ್ನು ತಯಾರಿಸಿಕೊಂಡು, ಅದಕ್ಕೆ ನನ್ನ ಮತ್ತು ಹಾಜರಿದ್ದ ಇಬ್ಬರು ವ್ಯಕ್ತಿಗಳ ಸಹಿಗಳನ್ನು ಪಡೆದು, ಅಲ್ಲಿ ಪೋಟೋಗಳನ್ನು ಕೂಡ ತೆಗೆಸಿರುತ್ತಾರೆ. ಈಗ ನೋಡುತ್ತಿರುವ ಕಚ್ಚಾ ನಕಾಶೆ ಮತ್ತು ಪೋಟೋಗಳು ಅವುಗಳೇ ಇರುತ್ತವೆ. ಕಚ್ಚಾ ನಕಾಶೆಯನ್ನು ನಿಪಿ–3 ಎಂದು, ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು, 2 ಪೋಟೋಗಳನ್ನು ಕ್ರಮವಾಗಿ ನಿಪಿ–4 ಮತ್ತು 5 ಎಂದು ಗುರುತಿಸಲಾಯಿತು.

ನಿಪಿ–4 ಮತ್ತು 5 ಎಂದು ಗುರುತಿಸಿದ ಪೋಟೋಗಳಲ್ಲಿ ನಾನು ಮತ್ತು ಪೋಲೀಸರು ಕಾಣುತ್ತಿದ್ದು ಮತ್ತು ಪಂಚನಾಮೆ ಮಾಡುವಾಗ ಸ್ಥಳದಲ್ಲಿ ಇದ್ದ ಇಬ್ಬರು ವ್ಯಕ್ತಿಗಳೂ ಕೂಡ ಆ ಪೋಟೋಗಳಲ್ಲಿ ಕಾಣುತ್ತಿದ್ದಾರೆ. ಮೇಲೆ ಹೇಳಿದಂತೆ ಪೋಲೀಸರು ಪಂಚನಾಮೆಯಡಿ ಜಪ್ತು ಮಾಡಿಕೊಂಡ ಚಾಕುವನ್ನು ಮತ್ತೆ ನೋಡಿದಲ್ಲಿ

ಗುರುತಿಸುತ್ತೇನೆ. ಈಗ ನೋಡುತ್ತಿರುವ ಕಟರ್ ಮೇಲೆ ಹೇಳಿದಂತೆ ನಾನು ಹೇಳಿದ ಚಾಕುವೇ ಇರುತ್ತದೆ. ಸದರಿ ಕಟರ್ ನ್ನು ಈಗ ಎಂಒ–1 ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ಘಟನಾ ಸ್ಥಳದಲ್ಲಿ ಅಲ್ಲಲ್ಲಿ ಬಿದ್ದಿದ್ದ ರಕ್ತದ ಕಲೆಯನ್ನು ಮಣ್ಣು ಸಹಿತ ತೆಗೆದು ಕೊಂಡಿದ್ದು, ಅದನ್ನು ನೋಡಿದಲ್ಲಿ ನಾನು ಗುರುತಿಸುತ್ತೇನೆ( ಈ ವೇಳೆಗೆ 6 ಸೀಲ್ ಮಾಡಿದ ಬಿಳಿ ಚೀಲಗಳನ್ನು ತೆಗೆದು ನೋಡಲಾಗಿ, ಆದರಲ್ಲಿ ಕವರ್ ಗಳಿದ್ದು ಮತ್ತು ಆ ಕವರಿನಲ್ಲಿ ಒಂದು ಬಿಳಿಯ ಹಾಳೆಯಲ್ಲಿ ರಕ್ತದ ಕಲೆ ಇರುವ ಸ್ವಾಬ್ ಇರುವುದು ಕಂಡು ಬರುತ್ತದೆ. ಸದರಿ ಸ್ವಾಬನ್ನು ಪೇಪರ್ ಸಹಿತ ಎಂಒ–2 ರಿಂದ 7 ಎಂದು ಗುರುತಿಸಲಾಯಿತು.

**– ಪಾಟೀ ಸವಾಲು – ಆರೋಪಿಯ ಪರ – ಶ್ರೀಮತಿ ಕೆ.ಎಸ್.ಆರ್. ವಕೀಲರಿಂದ –**

ಆರೋಪಿ ಪರ ವಕೀಲರು ಬಿ.ಎನ್.ಎಸ್.ಎಸ್. ಕಲಂ 254(3) ಅಡಿಯಲ್ಲಿ ಅರ್ಜಿ ಸಲ್ಲಿಸಿ ಚಾಸಾ–1 ರಿಂದ 6 ಇವರು ಒಬ್ಬರಿಗೊಬ್ಬರು ಸಂಬಂಧಿಕರು ಮತ್ತು ಸ್ನೇಹಿತರಿದ್ದು, ಅದರಿಂದ ಅವರೆಲ್ಲರ ಪಾಟೀ ಸವಾಲನ್ನು ಒಮ್ಮೆ ಮಾಡುವುದಾಗಿ ಕೋರಿ ಅರ್ಜಿ ಸಲ್ಲಿಸಿ ಕಾಲಾವಕಾಶ ಕೋರಿದ್ದು, ಕಾರಣ ಕಾಲಾವಕಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿತ್ರದುರ್ಗ.